ದಿನಾಂಕಃ03.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಟಿ.ಎಸ್.ಆರ್. ವಕೀಲರಿಂದ 2 ಮತ್ತು 6 ನೇ ಪ್ರತಿವಾದಿ ಪರ**

ಅಗಸರ ದಾನಪ್ಪ ರವರಿಗೆ ಎ ಶೆಡ್ಯೂಲ್ ಸ್ವತ್ತು ಸರಕಾರದಿಂದ ಮಂಜೂರಾದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ. ಬಿ ಮತ್ತು ಸಿ ಶೆಡ್ಯೂಲ್ ಸ್ವತ್ತು ಸ್ವಾಧೀನವನ್ನು 2 ನೇ ಪ್ರತಿವಾದಿ ಹೊಂದಿದ್ದರು ಎಂದರೆ ಸರಿಯಲ್ಲ. ಸದರಿ ಸ್ವಾಧೀನವನ್ನು ಗುರುತಿಸಿ 2 ನೇ ಪ್ರತಿವಾದಿ ಹೆಸರಿಗೆ ಪುರಸಭೆ ರವರು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಅಕ್ರಮವಾಗಿ ಆಗಿರುತ್ತದೆ ಎನ್ನುವರು. ಸದರಿ ಕ್ರಯ ಪತ್ರದಂತೆ ಖಾಸೆ ಸಹ ಅವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಅಕ್ರಮವಾಗಿ ಆಗಿರುತ್ತದೆ ಎನ್ನುವರು. 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಸದರಿ ಸ್ವತ್ತುಗಳನ್ನು ಮಾರಾಟ ಮಾಡಿ ಅದರ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ಅಗಸರ ದಾನಪ್ಪ ರವರಿಗೆ ಎ ಶೆಡ್ಯೂಲ್ ಸ್ವತ್ತು ಆಸ್ಥಿ ಮೇಲೆ ಯಾವುದೇ ಅಧಿಕಾರ ಅಥವಾ ಸ್ವಾಧೀನ ಇರಲಿಲ್ಲ, ಅ ಕಾರಣ ನನಗೆ ಅಥವಾ ನನ್ನ ತಂದೆಗೆ ಕ್ರಯ ಪತ್ರದ ಅಡಿಯಲ್ಲಿ ಯಾವುದೇ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

6 ನೇ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಅವರು ಯಾವ ದಿನಾಂಕ ಒತ್ತುವರಿ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಾನೇ ಅಳತೆ ಮಾಡಿ ಎಷ್ಟು ಒತ್ತುವರಿ ಮಾಡಿರುತ್ತಾರೆ ಎಂದು ವಾದಪತ್ರದಲ್ಲಿ ಹೇಳಿರುತ್ತೇನೆ. ದಾವ ಸ್ವತ್ತು ಎಲ್ಲಿಂದ ಪ್ರಾರಂಭವಾಗುತ್ತದೆ ಮತ್ತು ಮುಕ್ತಾಯವಾಗುತ್ತದೆ ಎಂದು ನಕಾಶೆ ಇರುವುದಿಲ್ಲ. ನಮ್ಮ ಸ್ವತ್ತಿಗೆ ಬೇಲಿ ಇತ್ತು. 6 ನೇ ಪ್ರತಿವಾದಿ ನಮ್ಮ ಮನೆಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅವರು ಬೇಲಿ ತೆಗೆದು ಮನೆ ಕಟ್ಟಲು ಪ್ರಯತ್ನ ಪಟ್ಟಾಗ ಈ ದಾವೆಯನ್ನು ಸಲ್ಲಿಸಿರುತ್ತೇನೆ. 6 ನೇ ಪ್ರತಿವಾದಿಗೆ 40*20+10/2 ಮೀಟರ್ ಸ್ವತ್ತು ಇರುತ್ತದೆ ಎಂದರೆ ಗೊತ್ತಿಲ್ಲ. ಅವರು ಖರೀದಿ ಮಾಡಿದ ಸ್ವತ್ತಿನಲ್ಲಿ ಸ್ವಾಧೀನ ಹೊಂದಿರುತ್ತಾರೆ ಹೊರತು ನಾನು ಹೇಳಿದಂತೆ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎ ಶೆಡ್ಯೂಲ್ ಸ್ವತ್ತು 50*150 ಅಡಿ ಇರುತ್ತದೆ. ಎ ಶೆಡ್ಯೂಲ್ ಸ್ವತ್ತು ನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಗರಸಭೆ ದಾಖಲೆ ಹೊರತುಪಡಿಸಿ ನಾನು ಎ ಶೆಡ್ಯೂಲ್ ಸ್ವತ್ತು ಸ್ವಾಧೀನ ಹೊಂದಿರುತ್ತೇನೆ ಎಂದು ಯಾವುದೇ ದಾಖಲೆ ಇರುವುದಿಲ್ಲ. ನಾನು ಸದರಿ ಸ್ವತ್ತಿನಲ್ಲಿ ಮನೆ ಕಟ್ಟಲು ಯಾವುದೇ ಪ್ರಯತ್ನ ಪಟ್ಟಿರುವುದಿಲ್ಲ. 6 ನೇ ಪ್ರತಿವಾದಿ ಯಾವುದೇ ಒತ್ತುವರಿ ಮಾಡಿರುವುದಿಲ್ಲ, ಅವರ ವಿರುದ್ದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಅಧಿಕಾರ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ